ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಗುರುವಾರ, ದಿನಾಂಕ : 24 ನೇ ಸೆಪ್ಟೆಂಬರ್, 2020

ಡ್ರಗ್ಸ್ ಅಕ್ರಮ ಮಾರಾಟ ಪಿಡುಗಿನ ನಿಗ್ರಹದ ಬಗ್ಗೆ

ಶ್ರೀ ಕೆ. ಗೋವಿಂದರಾಜ್(ವಿಧಾನಸಭೆಯಿಂದ ಚುನಾಯಿತರಾದವರು) –

452 (608) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ 3 ವರ್ಷಗಳ ಅವಧಿಯಲ್ಲಿ ಬೆಂಗಳೂರು ನಗರ ಸೇರಿದಂತೆ ರಾಜ್ಯದ ಯಾವ ಯಾವ ಭಾಗಗಳಲ್ಲಿ ಮಾದಕ ವಸ್ತು ಮಾರಾಟಗಾರರ ಬಂಧನವಾಗಿದ್ದು, ಮತ್ತು ಯಾವ ಯಾವ ಮಾದಕ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ;

(ಆ) ಈ ಮಾದಕ ವಸ್ತುಗಳ ಬಳಕೆ ಮತ್ತು ಪೂರೈಕೆದಾರರ ಜಾಲದಲ್ಲಿ ಭಾಗಿಗಳಾಗಿರುವವರ ಮಾಹಿತಿ ಗೃಹ ಇಲಾಖೆಯಲ್ಲಿ ಇದೆಯೇ; ಹಾಗಿದ್ದಲ್ಲಿ, ಅಂತಹ ಸಂಕಷ್ಟ ವ್ಯಕ್ತಿಗಳ ಪ್ರತ್ಯೇಕ ಮಾಹಿತಿ ಮತ್ತು ಕೈಗೊಂಡಿರುವ ಕ್ರಮಗಳ ಸಂಪೂರ್ಣ ವಿವರ ಒದಗಿಸುವುದು;

(ಇ) ಲಾಕ್‌ಡೌನ್‌ನ ಇಂತಹ ಸಂಕಷ್ಟ ಸಂದರ್ಭದಲ್ಲೂ ಸಹ ಬೆಂಗಳೂರು ನಗರದಲ್ಲಿ ಕೋಟ್ಯಾಂತರ ರೂಪಾಯಿಗಳ ಮಾದಕ ವಸ್ತು/ದ್ರವ್ಯ/ಡ್ರಗ್ಸ್ ಮಾರಾಟವಾಗಿರುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಡ್ರಗ್ಸ್ ಅಕ್ರಮ ಮಾರಾಟ ಮತ್ತು ಬಳಕೆದಾರರ ಮಾಹಿತಿ ಪಡೆದು ನಿಯಂತ್ರಿಸುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿರುವುದು ಹಾಗೂ ಮಾದಕ ವಸ್ತು ನಿಗ್ರಹ ದಳ (ಎನ್.ಸಿ.ಬಿ) ರವರು ತನಿಖೆ ಕೈಗೆತ್ತಿಕೊಂಡಿರುವುದು ನಿಜವೇ; ಹಾಗಿದ್ದಲ್ಲಿ, ಸರ್ಕಾರ ಈ ನಿಟ್ಟಿನಲ್ಲಿ ಯಾವ ರೀತಿಯ ತನಿಖಾ ವ್ಯಾಪ್ತಿ ಮತ್ತು ನಿಯಂತ್ರಣದ ಬಗ್ಗೆ ಕ್ರಮ ಕೈಗೊಂಡಿದೆ; (ಸಂಪೂರ್ಣ ಮಾಹಿತಿ ಒದಗಿಸುವುದು)

(ಉ) ವಿದ್ಯಾರ್ಥಿಗಳು ಮತ್ತು ಯುವ ಜನತೆಯನ್ನು ದಾರಿ ತಪ್ಪಿಸುವ, ಸಮಾಜದ ಶಾಂತಿ ಭಂಗಕ್ಕೆ ಸಮಾಜದ ಸ್ವಾಸ್ಥ್ಯಕ್ಕೆ ಮಾರಕವಾಗಿರುವ ಈ ಪಿಡುಗು ನಿವಾರಿಸುವ ನಿಟ್ಟಿನಲ್ಲಿ ಸರ್ಕಾರದ ಕಾನೂನು ಕ್ರಮಗಳು ಮತ್ತು ಇದುವರೆಗಿನ ಫಲಶೃತಿ ಕುರಿತಾಗಿ ಸಂಪೂರ್ಣ ಮಾಹಿತಿ ಒದಗಿಸುವುದು?